೧೪ ಬೈಂದೂರಿನ ಬಳಿ ಬಿಜೂರು ಗ್ರಾಮದ ಪರಿಶಿಷ್ಟ ವರ್ಗಕ್ಕೆ ಸೇರಿದ ರೈತನ ಮೇಲೆ ಹಲ್ಲೆ.

೧–೦೦ ಪಿ. ಎಂ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನ ಬಳಿಯ ಬಿಜೂರು ಗ್ರಾಮದಲ್ಲಿ ಪರಿಶಿಷ್ಟವರ್ಗಕ್ಕೆ ಸೇರಿದ ಕೊರಗ ಜನಾಂಗದ ದುರ್ಬಲ ರೈತನೊಬ್ಬನ ಗೇರು ತೋಟಕ್ಕೆ ಪ್ರವೇಶಿಸಿ ಅಕ್ರಮವಾಗಿ ಗೇರು ಬೀಜವನ್ನು ಕೆಲವರು ತೆಗೆದರೆಂದೂ ಆತ ಪ್ರಶ್ನಿಭಟಿಸಿದಾಗ, ಸುಮಾರು ಮೂರು ದಿನಗಳ ಹಿಂದೆ ಆತನನ್ನು ಸುಮಾರು ೧೮ ಜನ ಮೇಲ್ವರ್ಗದವರು ಸೇರಿ ಕಂಬಕ್ಕೆ ಕಟ್ಟಿ ಅಮಾನುಷವಾಗಿ ಹಲ್ಲೆ ಮಾಡಿದರೆಂದೂ ಆರಕ್ಷಕ ಹಾಗೂ ಕಂದಾಯ ಇಲಾಖೆಯವರು ಬಡ ದಲಿತರಿಗೆ ನ್ಯಾಯ ದೊರಕಿಸಲು ಸಾಕಷ್ಟು ಶ್ರಮಿಸುತ್ತಿದ್ದರೂ ಬಲಿಷ್ಠರು ದಂಡು ಕಟ್ಟಿ ಪುನ: ಹಲ್ಲೆ ಮಾಡಿ, ಭೂ ಸ್ವಾಧೀನ ಮಾಡುವ ಸಂಬಂಧವಿದೆಯೆಂದೂ ತಿಳಿದುಬಂದಿದ್ದು, ಈ ವಿಚಾರದಲ್ಲಿ ಸೂಕ್ತ ತನಿಖೆ ಬೇಗ ನಡೆಸಿ ಬಡವನಿಗೆ ನ್ಯಾಯ ದೊರಕಿಸಬೇಕೆಂದೂ ದುಷ್ಟರಿಗೆ ಶಿಕ್ಷೆಯಾಗುವಂತೆ ನೋಡಬೇಕೆಂದೂ ಮತ್ತು ಮುಂದೆ. ಇಂತಹ ಕೃತ್ಯಗಳು ಜರಗದಂತೆ ರಕ್ಷಣೆ ನೀಡಬೇಕೆಂದೂ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೆ. ಇದನ್ನು ತಕ್ಷಣ ನಾನು ವಿಚಾರಣೆ ಮಾಡಿ ಗೇಣಿದಾರರಿಗೆ ರಕ್ಷಣೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

೧೫ ಮಾಜಿ ಗೇಣಿದಾರರಿಗೆ ಪರಿಹಾರ ಕೊಡುವುದರ ಬಗ್ಗೆ.

ಶ್ರೀ ಕೆ. ವಸಂತ ಬಂಗೇರ,—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ೧೦ ಎಕರೆವರೆಗೆ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ತೀರ್ಪಾದ ಮಾಜಿ ಗೇಣಿದಾರರಿಗೆ ಪರಿಹಾರ ಮನ್ನಾ ಮಾಡಿ ಇನ್ನೂ ಮುಂದೆ ಕಂತನ್ನು ಪಾವತಿ ಮಾಡಬೇಕಾಗಿಲ್ಲ. ಎಂದು ಮಾನ್ಯ ಮುಖ್ಯಮಂತ್ರಿಗಳು ಎರಡು ವರ್ಷಗಳ ಹಿಂದೆ ಮಾಡಿದ ಘೋಷಣೆಯ ಅರ್ಥವೇನು ? ಈ ಘೋಷಣೆ. ಘೋಷಣೆಯಾಗಿಯೇ ಉಳಿದಿದೆಯೇ ಏನು: ಕಾರ್ಯರೂಪಕ್ಕೆ ಬರದಿರಲು ಕಾರಣ ಏನು ? ಈ ವಿಚಾರದಲ್ಲಿ ಅನೇಕ ಜನ ಸದಸ್ಯರು ಹಾಗೂ ನಾನು ಕೂಡ ಸದನದಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇನೆ. ಆದರೆ ಒಂದೊಂದು ಸಲ ಒಂದೊಂದು ರೀತಿಯ ಉತ್ತರ ಬರಲು ಕಾರಣವೇನು ? ಮಾನ್ಯ ಮುಖ್ಯ ಮಂತ್ರಿಗಳ ಘೋಷಣೆಗೆ ಯಾರಾದರೂ ಅಡ್ಡಿಬರುತ್ತಿದ್ದಾರೆಯೇ ? ಮಾನ್ಯ ಮುಖ್ಯ ಮಂತ್ರಿಗಳು ಇವತ್ತಿನ ತನಕ ಆಡಿದ ಮಾತಿಗೆ ತಪ್ಪಿಲ್ಲ. ಇದರಲ್ಲೇಕೆ ತಪ್ಪಿದರು ? ಒಂದು ಸಂದರ್ಭ ಈ ಘೋಷಣೆ ಯಾಕೆ ಜಾರಿಗೆ ಬಂದಿಲ್ಲವೆಂದು ಪ್ರಶ್ನಿಸಿದಾಗ ತಾ ೧೭–೧೦–೮೪ ರಿಂದ ಪೂರ್ವಾನ್ವಯ ಆಗುವಂತೆ ತಾ ೧೬–೧೦–೮೫ ರಿಂದ ಜಾರಿಗೆ ಬಂದಿದೆ. ಮತ್ತು ತಾ ೧೭–೧೦–೮೪ ರಿಂದ ಪ್ರೀಮಿಯಂನ್ನು ಕೊಡಬೇಕಾಗಿಲ್ಲ ಎಂದು ಹೇಳಿದ್ದಾರೆ. ಇದು ಯಾವ ಪ್ರೀಮಿಯಂ ? ಪ್ರೀಮಿಯಂ ಮನ್ನಾ ಆದ ನಂತರ ಪಿ. ಎಲ್. ಡಿ. ಬ್ಯಾಂಕಿನ ಸಾಲದ ಪ್ರೀಮಿಯಂನ್ನು ರೈತನೇಕೆ ಕಟ್ಟಬೇಕು ? ಇದು ಯಾವ ನ್ಯಾಯ, ಪರಿಹಾರ ಮನ್ನಾ ಮಾಡಲು ಸರ್ಕಾರದವರು ತೆಗೆದುಕೊಂಡಂತಹ ಕ್ರಮವೇನು ಎಂದು ಕೇಳಿದರೆ ಪರಿಹಾರ ಮನ್ನಾ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಹಾಗೂ ಪ್ರೀಮಿಯಂನ್ನು ತಾ ೧೭–೧೦–೮೪ ರಿಂದ ಮನ್ನಾ ಮಾಡಲಾಗಿದೆ ಎಂದು ತಿಳಿಸುತ್ತಾರೆ. ಇದರ ಅರ್ಥವೇನು ಸ್ವಾಮಿ ? ಸಚಿವರಾದ ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಕೆಲವು ದಿನಗಳ ಹಿಂದೆ ಬೆಳ್ತಂಗಡಿಯಲ್ಲಿ ಕೆ.ಡಿ.ಪಿ. ಮೀಟಿಂಗ್ ಸಂದರ್ಭದಲ್ಲಿ ತಾಲ್ಲೂಕಿನ ಎಲ್ಲಾ ಅಧಿಕಾರಿಗಳ ಸಮಕ್ಷಮ ಪಿ ಎಲ್.ಡಿ ಬ್ಯಾಂಕಿನ ಕಾರ್ಯದರ್ಶಿಯವರಿಗೆ ಈ ರೀತಿ ತಿಳಿಸಿರುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಘೋಷಣೆ ಮಾಡಿದಂತೆ ೧೦ ಎಕರೆವರೆಗೆ ಮಾಜಿಗೇಣಿದಾರನ ಪರಿಹಾರವನ್ನು ಮನ್ನಾ ಮಾಡಲಾಗಿದೆ. ಇನ್ನು ಮುಂದೆ ಪಿ.ಎಲ್.ಡಿ, ಬ್ಯಾಂಕಿನ ಕಂತಿನ ಹಣ ವಸೂಲು ಮಾಡಬಾರದು, ಅವರಿಗೆ ಆಗಿಂದಾಗ್ಗೆ ನೋಟೀಸು ಕೊಡಬಾರದು ಅಲ್ಲದೆ ಮೂರು ನೋಟೀಸು ಕೊಟ್ಟ ನಂತರ ಎ. ಆರ್. ಕೋರ್ಟಿಗೆ ಹಾಕಬಾರದು, ಸರ್ಕಾರದಿಂದ ತಕ್ಷಣ ಆಜ್ಞೆ ಬರುತ್ತದೆ ಎಂದು ತಿಳಿಸಿರುತ್ತಾರೆ. ಅವರು ತಿಳಿಸಿದಂತೆ ಕೆ.ಡಿ.ಪಿ ಮೀಟಿಂಗ್‌ನಲ್ಲಿ ಈ ರೀತಿ ಹೇಳುತ್ತಾರೆಯೇ ? ಪರಿಹಾರ ಮನ್ನಾ ಎಂದ ಮೇಲೆ ೧೦ ಎಕರೆವರೆಗಿನ ಮಾಜಿ ಗೇಣಿದಾರರು ಘೋಷಣೆಯ ನಂತರ ಪಿ.ಎಲ್.ಡಿ. ಬ್ಯಾಂಕಿನ ಹಣವನ್ನು ಪಾವತಿ